# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470

ಮಿಂಚಂಚೆ: info@bsgkarnataka.org/ ಅಂತರ್ಜಾಲ: www.bsgkarnataka.in

ಸಂಖ್ಯೆ:ಎಸ್‌ಹೆಚ್‌ಕ್ಯೂ/ತ.1/ಸ್ಥ.ಜಿ.ರಾ.ಮೂ.ತ.ಶಿ-02/2026-27/ 1046 ದಿನಾಂಕ:05.09.2026

ರಾಜ್ಯದ ಎಲ್ಲಾ ಜಿಲ್ಲಾ ಕಾರ್ಯದರ್ಶಿಯವರಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಸಂಸ್ಥೆ
ಕರ್ನಾಟಕ.

ಮಾನ್ಯರೆ,

ವಿಷಯ:- ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್‌ಗಳಿಗೆ ರಾಜ್ಯ ಮಟ್ಟದಲ್ಲಿ ಆಯೋಜಿಸಿರುವ **ಮುಂದುವರೆದ ತರಬೇತಿ** ಶಿಬಿರಕ್ಕೆ ಶಿಬಿರಾರ್ಥಿಗಳನ್ನು ನಿಯೋಜಿಸುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳ ಮುಂದುವರೆದ ತರಬೇತಿ ಶಿಬಿರಗಳನ್ನು **ಪದವಿ ಪೂರ್ವ ಕಾಲೇಜು ಮತ್ತು ಪದವಿ ಕಾಲೇಜುಗಳ ಉಪನ್ಯಾಸಕರುಗಳಿಗೆ** ಸಂಘಟಿಸಲಾಗಿದೆ. ವಿವರಗಳು ಈ ಕೆಳಕಂಡಂತಿವೆ:

| | |
|---|---|
| **ತರಬೇತಿ** | **ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳಿಗೆ ರಾಜ್ಯ ಮಟ್ಟದಿಂದ ಆಯೋಜಿಸಿರುವ ಮುಂದುವರೆದ ತರಬೇತಿ ಶಿಬಿರ** |
| **ಸ್ಥಳ** | **ಡಾ॥ ಆನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.** |
| **ದಿನಾಂಕ** | **24.09.2026ರಿಂದ 30.09.2026ರವರೆಗೆ (7 ದಿನಗಳು)** |
| ಹಾಜರಾಗುವ ದಿನಾಂಕ | 24.09.2026ರ ಬೆಳಗ್ಗೆ 09.00 ಗಂಟೆಯ ಒಳಗೆ ಹಾಜರಾಗುವುದು. ನೊಂದಣಿ ಸಮಯದಲ್ಲಿ ಸಂಬಂಧಪಟ್ಟ ಉಪನ್ಯಾಸಕರು/ಉಪನ್ಯಾಸಕಿಯರು ಮತ್ತು ತಮ್ಮ ದಳ(Unit)ದ ಮತ್ತು ದಳ ನಾಯಕ (Unit Leader) ಹಾಗೂ ರೋವರ್ಸ್/ರೇಂಜರ್ಸ್ ವಿದ್ಯಾರ್ಥಿ/ವಿದ್ಯಾರ್ಥಿನಿಯರ **BSGUID No.** ಸಮೇತ ಪಟ್ಟಿಯನ್ನು ತರುವುದು. |
| ಬಿಡುಗಡೆ ದಿನಾಂಕ | 30.09.2026ರ ಸಂಜೆ 04.00 ಗಂಟೆಗೆ |
| ಪ್ರತಿಯೊಬ್ಬರಿಗೆ ಶಿಬಿರದ ಶುಲ್ಕ | 1. ಊಟೋಪಚಾರದ ಶುಲ್ಕ ದಿನ ಒಂದಕ್ಕೆ ರೂ. 150/-ರಂತೆ 7 ದಿನಕ್ಕೆ --- ರೂ. 1050/-<br>2. ಶಿಬಿರ ನೊಂದಾವಣಿ ಶುಲ್ಕ --- ರೂ. 200/-<br>3. ಸ್ಕೌಟ್/ಗೈಡ್ ಮಾಸಪತ್ರಿಕೆ ಶುಲ್ಕ --- ರೂ. 200/-<br>5. ರೋವರ್/ರೇಂಜರ್ ಘಟಕ ನೊಂದಣಿ ವಾರ್ಷಿಕ ಶುಲ್ಕ-- ರೂ. 194/-<br>**ಪ್ರತಿಯೊಬ್ಬರಿಗೆ ಒಟ್ಟು --- ರೂ. 1644/-** |
| ಭಾಗವಹಿಸುವ ಉಪನ್ಯಾಸಕ/ಉಪನ್ಯಾಸಕಿಯರು ಈ ಲಿಂಕ್ ಮೂಲಕ ದಿನಾಂಕ 18.09.2026ರೊಳಗೆ ನೊಂದಣಿ ಮಾಡಿಕೊಳ್ಳುವುದು. | https://zfrmz.in/yzUtm7FPkyi7g4PQzIKO |
| ರೋವರಿಂಗ್/ರೇಂಜರಿಂಗ್ (ಪುಸ್ತಕಗಳು) ಸಾಹಿತ್ಯ | ಶಿಬಿರ ಕೇಂದ್ರದಲ್ಲಿ ಖರೀದಿಸುವುದು. ಕಾಲೇಜಿನ ಗ್ರಂಥಾಲಯದ ನಿಧಿಯಿಂದ ಹಣ ಭರಿಸುವುದು. |
| ಯಾರು ಭಾಗವಹಿಸಬಹುದು | ಪದವಿ ಪೂರ್ವ ಕಾಲೇಜುಗಳ & ಪದವಿ ಕಾಲೇಜುಗಳ ಉಪನ್ಯಾಸಕರುಗಳು/ ಉಪನ್ಯಾಸಕಿಯರುಗಳು ಈಗಾಗಲೇ RSL & RL **ಮೂಲ ತರಬೇತಿ ಶಿಬಿರವನ್ನು ಪೂರ್ಣಗೊಳಿಸಿ 6 ತಿಂಗಳು ಪೂರೈಸಿರಬೇಕು. ಮೂಲ ತರಬೇತಿ ಶಿಬಿರದ ಪ್ರಮಾಣ ಪತ್ರ ನಕಲು ಪ್ರತಿಯನ್ನು ತರುವುದು.** |

| | |
|---|---|
| ಪ್ರಯಾಣ ವೆಚ್ಚ | ಆಯಾಯ ಕಾಲೇಜುಗಳ ರೋವರ್-ರೇಂಜರ್ ನಿಧಿಯಿಂದ ಭರಿಸುವುದು |
| ಸಮವಸ್ತ್ರ | ಎ.ಪಿ.ಆರ್.ಒ. ನಿಯಮಾವಳಿಯಂತೆ ಶಿಬಿರಕ್ಕೆ ಸಂಪೂರ್ಣ ಸಮವಸ್ತ್ರ ಕಡ್ಡಾಯವಾಗಿರಲೇಬೇಕು. |
| ಊಟ ಮತ್ತು ವಸತಿ | ರಾಜ್ಯ ಸಂಸ್ಥೆಯ ವತಿಯಿಂದ ಊಟ ಮತ್ತು ವಸತಿ ವ್ಯವಸ್ಥೆ ಏರ್ಪಡಿಸಿದೆ. |
| ತರಬೇಕಾದ ವಸ್ತುಗಳು | 2 ಜೊತೆ ಸಂಪೂರ್ಣ ಸಮವಸ್ತ್ರ, ಬದಲಾಯಿಸಲು ಉಡುಪು, **ರೇಂಜರಿಂಗ್/ರೋವರಿಂಗ್‌ಗೆ ಸಂಬಂದಿಸಿದ ಪುಸ್ತಕಗಳು,** ಬೆಚ್ಚಗಿನ ಹಾಸಿಗೆ, ತಟ್ಟೆ, ಲೋಟ, 200 ಪೇಜ್‌ನ ನೋಟ್ ಪುಸ್ತಕ, ಡ್ರಾಯಿಂಗ್ ಶೀಟ್, ಸೂಜಿದಾರ, ಸ್ಕೆಚ್‌ಪೆನ್ಸ್, ಲೇಖನ ಸಾಮಗ್ರಿಗಳು, ಮೂರು ಮೀಟರ್ ಕಾಟನ್ ಬಿಳಿ ಹಗ್ಗ, ಛತ್ರಿ, ಟಾರ್ಚ್, ಮಸ್ಕಿಟೋ ಕಾಯಿಲ್ ಮತ್ತು ಇತರೆ ಶಿಬಿರಕ್ಕೆ ಬೇಕಾಗುವ ಹಾಗೂ ವೈಯಕ್ತಿಕ ವಸ್ತುಗಳು ಮತ್ತು ಔಷಧಿ. |
| ಜಿಲ್ಲೆಗೆ ನಿಗದಿಪಡಿಸಿರುವ ಸಂಖ್ಯೆ (ಕೋಟಾ) | ಮೂಲ ತರಬೇತಿ ಹೊಂದಿರುವ ಎಲ್ಲಾ ರೋವರ್ ಸ್ಕೌಟ್ ಲೀಡರ್ ಉಪನ್ಯಾಸಕರು **ಮತ್ತು** ರೇಂಜರ್ ಲೀಡರ್ ಉಪನ್ಯಾಸಕಿಯರು |
| ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ | ಕಛೇರಿ ದೂರವಾಣಿ ಸಂಖ್ಯೆ: 080-22267470, 080-2226 0017<br>ಶ್ರೀ. ನಾಗೇಶ್ ಆರ್. ಶಿವಪುರ್, ರಾ.ತ.ಆ(ಸ್ಕೌ) - 9731854272<br>ಶ್ರೀಮತಿ. ಕೆ.ವಿ. ಶಾಮಲ, ರಾ.ತ.ಆ(ಗೈ) - 9980237570<br>ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎಎಸ್‌ಒಸಿ(ಗೈ), ರೇಂಜರ್ ಇನ್ ಚಾರ್ಜ್ - 7259115730 |

**ಶಿಬಿರದ ಶುಲ್ಕ ರೂ. 1644/-, ದಳ ನವೀಕರಣ ಶುಲ್ಕ, ಸ್ಕೌಟ್ ಗೈಡ್ ಮಾಸ ಪತ್ರಿಕೆ ವಾರ್ಷಿಕ ಚಂದಾಹಣ ಹಾಗೂ ಹೋಗಿ ಬರುವ ಪ್ರಯಾಣದ ವೆಚ್ಚವನ್ನು ಆಯಾ ಕಾಲೇಜಿನ ರೋವರ್-ರೇಂಜರ್ ಚಾಲ್ತಿ ನಿಧಿ ಅಥವಾ ಸಂಚಿತ ನಿಧಿಯಿಂದ ಸರ್ಕಾರಿ ಆದೇಶದಂತೆ ಭರಿಸಲು ಅವಕಾಶವಿರುತ್ತದೆ.** ತಾವು ಈಗಾಗಲೇ ರೋವರ್-ರೇಂಜರ್ ಶಿಕ್ಷಣದ ಮೂಲ ತರಬೇತಿ ಹೊಂದಿದ ತಮ್ಮ ಜಿಲ್ಲೆಯ ಪದವಿ & ಪದವಿ ಪೂರ್ವ ಕಾಲೇಜುಗಳಿಂದ ಉಪನ್ಯಾಸಕರನ್ನು-ಉಪನ್ಯಾಸಕಿಯರುಗಳನ್ನು ನಿಯೋಜಿಸುವಲ್ಲಿ ತಮ್ಮ ಜಿಲ್ಲೆಯ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಹಾಗೂ ಪ್ರಾಂಶುಪಾಲರು, ಪದವಿ ಪೂರ್ವ ಕಾಲೇಜು ಮತ್ತು ಪದವಿ ಕಾಲೇಜು ಪ್ರಾಂಶುಪಾಲರುಗಳನ್ನು ಸಂಪರ್ಕಿಸಿ ಸೂಕ್ತ ಅನುಮತಿ ಪಡೆದು ಅವರುಗಳನ್ನು ಮೇಲ್ಕಂಡ ಶಿಬಿರದಲ್ಲಿ ಸಕಾಲದಲ್ಲಿ ಭಾಗವಹಿಸುವಲ್ಲಿ ತ್ವರಿತ ಕ್ರಮ ಕೈಗೊಳ್ಳಲು ತಿಳಿಸಿದೆ.

ಸ್ಕೌಟ್-ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

**ರಾಜ್ಯ ಮುಖ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ**

(ಕೆ. ಗಂಗಪ್ಪ ಗೌಡ)
ರಾಜ್ಯ ಕಾರ್ಯದರ್ಶಿ

**ಪ್ರತಿಯನ್ನು ಗೌರವದೊಂದಿಗೆ ಈ ಕೆಳಕಂಡವರಿಗೆ ಕಳುಹಿಸುತ್ತಾ ಅರ್ಹ ಉಪನ್ಯಾಸಕ/ಉಪನ್ಯಾಸಕಿಯರನ್ನು ತಮ್ಮ ಜಿಲ್ಲಾ ಸಂಸ್ಥೆಯಿಂದ ನಿಯೋಜಿಸಿ, ಸದರಿ ಶಿಬಿರಕ್ಕೆ ಸಕಾಲದಲ್ಲಿ ಹಾಜರಾಗುವಲ್ಲಿ ಅನುಮತಿಯ ಆದೇಶ ನೀಡಿ ಪ್ರೋತ್ಸಾಹಿಸಬೇಕಾಗಿ ವಿನಂತಿಸುತ್ತೇನೆ.**

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು

**ಪ್ರತಿಯನ್ನು ಮಾಹಿತಿಗಾಗಿ ಹಾಗು ಮುಂದಿನ ಸೂಕ್ತ ಕ್ರಮಕ್ಕಾಗಿ:**

1. ಮಾನ್ಯ ರಾಜ್ಯ ಆಯುಕ್ತರು(ಸ್ಕೌಟ್ಸ್)(ಗೈಡ್ಸ್)(ವ.ಸಂ), ಭಾ.ಸ್ಕೌ & ಗೈ, ಕರ್ನಾಟಕ
2. ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ & ಗೈ, ಕರ್ನಾಟಕ
3. ರಾಜ್ಯ ನೋಡಲ್ ಅಧಿಕಾರಿಗಳು(ರೋವರ್ಸ್-ರೇಂಜರ್ಸ್ ವಿಭಾಗ) ಭಾ.ಸ್ಕೌ&ಗೈ, ಕರ್ನಾಟಕ
4. ಎಲ್ಲಾ ಜಿಲ್ಲಾ ತರಬೇತಿ ಆಯುಕ್ತರುಗಳಿಗೆ(ಸ್ಕೌ/ಗೈ), ಭಾ.ಸ್ಕೌ&ಗೈ, ಕರ್ನಾಟಕ
5. ಸಹಾಯಕ ರಾಜ್ಯ ಸಂಘಟನಾ ಆಯುಕ್ತರು/ ಜಿಲ್ಲಾ ಸಂಘಟಕರು/ ಎಸ್.ಜಿ.ವಿ/ಎಸ್.ಜಿ.ಎರವರಿಗೆ.
6. ವಾರ್ಡನ್, ಡಾ॥ ಆನಿಬೆಸೆಂಟ್ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ
7. ಲೆಕ್ಕ ಪತ್ರ ವಿಭಾಗ.
8. ಕಛೇರಿ ಟಿಪ್ಪಣಿ